ಮುಲ್ಲಾ ನಸ್ರುದ್ದೀನ್ ರಸ್ತೆಯಲ್ಲಿ ಏನನ್ನೋ ಹುಡುಕುತ್ತಿದ್ದ. ಅದನ್ನು ನೋಡಿದ ಪರಿಚಿತನೊಬ್ಬ ಕೇಳಿದ: 'ಏನನ್ನು ಹುಡುಕುತ್ತಿದ್ದೀಯಾ ನಸ್ರುದ್ದೀನ್?'

'ಬೀಗದ ಕೈ' – ಉತ್ತರಿಸಿದ ಮುಲ್ಲಾ.

ಸ್ವಲ್ಪ ಹೊತ್ತು ಹುಡುಕಿದ ಆ ವ್ಯಕ್ತಿ ಪ್ರಶ್ನಿಸಿದ: 'ಇಷ್ಟಕ್ಕೂ ಬೀಗದ ಕೈಯನ್ನು ಎಲ್ಲಿ ಬೀಳಿಸಿಕೊಂಡೆ?'

'ಮನೆಯಲ್ಲಿ' ಎಂದ ಮುಲ್ಲಾ.

'ಅಲ್ಲಯ್ಯ! ಮನೆಯಲ್ಲಿ ಕಳೆದಿದ್ದರೆ ಇಲ್ಲಿ ಯಾಕೆ ಹುಡುಕುತ್ತಿದ್ದೀಯಾ?!

'ಇಲ್ಲಿ ಬೆಳಕು ಚೆನ್ನಾಗಿದೆ, ಅದಕ್ಕೆ' – ಶಾಂತವಾಗಿ ಉತ್ತರಿಸಿದ ಮುಲ್ಲಾ ನಸ್ರುದ್ದೀನ್.

★★★

ಇದು ತುಂಬ ಪ್ರಸಿದ್ಧಿಯನ್ನು ಪಡೆದಿರುವ ಪ್ರಸಂಗ. ಇದನ್ನು ಒಂದೊಂದು ಸಲ ನೆನೆದಾಗಲೂ ಅರ್ಥದ ಒಂದೊಂದು ಹೊಸ ಆಯಾಮ ದಕ್ಕುತ್ತದೆ.

ಕಳೆದುಕೊಂಡಿರುವುದನ್ನು ಹುಡುಕುವುದು ಮನುಷ್ಯನ ಸಹಜ ಸ್ವಭಾವ. ಪ್ರಾಣಿಗಳು ಹೀಗೆ ಹುಡುಕುವುದಿಲ್ಲ ಎನಿಸುತ್ತದೆ. ಬಹುಶಃ ಅವಕ್ಕೆ ಕಳೆದುಕೊಳ್ಳುವುದಕ್ಕೆ ಏನೂ ಇಲ್ಲದಿರುವುದೇ ಇದಕ್ಕೆ ಕಾರಣ. ಎಂದರೆ ಮನುಷ್ಯ ಮಾತ್ರ ಕಳೆದುಕೊಳ್ಳಲು ಸಾಧ್ಯ. ಕಳೆದಿದೆ – ಎಂದೂ ಅವನು ಅರಿಯಬಲ್ಲ; ಅಷ್ಟೇ ಅಲ್ಲ, ಅದನ್ನು ಹುಡುಕಬಲ್ಲ; ಹಲವು ಸಂದರ್ಭಗಳಲ್ಲಿ ಮರಳಿ ಪಡೆಯುವಲ್ಲಿ ಯಶಸ್ವಿಯೂ ಆಗುತ್ತಾನೆನ್ನಿ!

ಕಳೆದುಕೊಳ್ಳುವುದಕ್ಕೆ ಮೊದಲು ಆ 'ವಸ್ತು' ಇರಬೇಕಲ್ಲವೆ? ವಸ್ತು ಇರಬೇಕು ಎಂದರೆ ಅದನ್ನು ಸಂಪಾದಿಸಿರಬೇಕು ತಾನೆ? ಹಾಗಾದರೆ ಮನುಷ್ಯ ಏನನ್ನು ಸಂಪಾದಿಸಿದ್ದಾನೆ; ಅಥವಾ ಸಂಪಾದಿಸಬಲ್ಲ? ಇದು ಪ್ರಶ್ನೆ. ಅವನು ಏನೆಲ್ಲ ಸಂಪಾದಿಸಬಲ್ಲ ಎಂದು ಹೇಳುವುದು ಸಾಧ್ಯವಿಲ್ಲ; ಆ ಪಟ್ಟಿಗೆ ಕೊನೆಯೇ ಇರದು. ಮೇಲಿನ ಕಥೆಯಲ್ಲಿ ಕಳೆದ ವಸ್ತುವನ್ನಾಗಿ ಬೀಗದ ಕೈಯನ್ನು ಹೇಳಿರುವುದರಲ್ಲಿ ಸ್ವಾರಸ್ಯ ಏನಾದರೂ ಉಂಟೆ?

ಎಲ್ಲರಿಗೂ ಸೇರಿದ್ದು ಬಯಲು. ಅದು ವಿಶಾಲ; ಎಲ್ಲೆ ಇಲ್ಲದಷ್ಟು ವಿಶಾಲ. ಆ ಬಯಲಿನಲ್ಲಿ ಗಡಿಯನ್ನು ಗುರುತಿಸಿಕೊಂಡು ಚಿಕ್ಕದಾದ ನೆಲವನ್ನು 'ನಮ್ಮ'ದನ್ನಾಗಿ ಮಾಡಿಕೊಳ್ಳುತ್ತೇವೆ. ಈ ನೆಲದಲ್ಲಿಯೇ 'ಆಲಯ'ವನ್ನು ನಿರ್ಮಿಸಿಕೊಳ್ಳುತ್ತೇವೆ. ಅದನ್ನು 'ಮನೆ' ಎಂದು ಕರೆಯುತ್ತೇವೆ; ಅಲ್ಲಿಯೇ ನೆಲಸತೊಡಗುತ್ತೇವೆ. ವಿಶಾಲವಾಗಿರುವುದನ್ನು ನಮ್ಮ ಭಯದಿಂದಾಗಿಯೋ ಅನಿವಾರ್ಯದಿಂದಾಗಿಯೋ ಮಿತಿಯಿಂದಾಗಿಯೋ, ಅಂತೂ ಸಂಕುಚಿತಗೊಳಿಸಿಕೊಳ್ಳುತ್ತೇವೆ. ಹಾಗೆ ಮಾಡಿಕೊಂಡು ಅದರಲ್ಲಿಯೇ ಬದುಕಲು ತೊಡಗುತ್ತೇವೆ. ನಾವು ಬಯಲನ್ನು ಆಕ್ರಮಿಸಿ ಆಲಯವನ್ನು ಕಟ್ಟಿಕೊಂಡವರು. ಹೀಗಾಗಿ ನಮಗೆ ನಮ್ಮ ಸ್ವಭಾವದ ಪರಿಚಯ ಚೆನ್ನಾಗಿಯೇ ಇರುವುದರಿಂದ ಭಯ; ನಾವು ಮಾಡಿದಂತೆಯೇ 'ನಮ್ಮ' ಆಲಯವನ್ನೂ ಯಾರಾದರೂ ಆಕ್ರಮಿಸಿ ತಮ್ಮದನ್ನಾಗಿಸಿಕೊಳ್ಳಬಹುದೆಂದು ಭಯ. ಈ ಭಯವೇ ಕೊಟ್ಟ ಅಭಯ ಎಂದರೆ 'ಬೀಗ'; ನಾವೇ ನಿರ್ಮಿಸಿಕೊಂಡಿರುವ ಆಲಯಕ್ಕೆ ಬೀಗವನ್ನು ಹಾಕುವುದು; ಯಾರು ಕೂಡ ಅತಿಕ್ರಮವಾಗಿ ಪ್ರವೇಶಿಸಲು ಆಗದಂತೆ ಮಾಡುವುದು; ಮಾತ್ರವಲ್ಲ, 'ಇದು ನನ್ನದು' ಎಂದು ಜಗತ್ತಿಗೆ ಘೋಷಿಸುವುದು ಕೂಡ ಇದರ ಉದ್ದೇಶಗಳಲ್ಲಿ ಒಂದು. ಮನೆಗೆ ಬೀಗ ಹಾಕುವುದು ಬೇರೆಯವರು ಒಳಗೆ ಹೋಗದಿರಲಿ ಎಂದು. ಹೀಗೆ ಒಮ್ಮೆ ಬೀಗ ಹಾಕಿದ ಬಳಿಕ ಬೇರೆ ಯಾರಾದರಿರಲಿ, ನಾವೇ ಮತ್ತೆ ಒಳಗೆ ಹೋಗಬೇಕಾದರೂ ಬೀಗದ ಕೈ ಬೇಕು. ಈಗ